# ಪರ್ಯಾಯ ಶೈಕ್ಷಣಿಕ ಯೋಜನೆ–2021-22

**5ನೇ ತರಗತಿ** **ಆಗಸ್ಟ್ ಮಾಹೆ** **ದ್ವಿತೀಯ ಭಾಷೆ ಕನ್ನಡ**

| ಕ್ರಮ ಸಂಖ್ಯೆ | ತಿಂಗಳು /ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | ಆಗಸ್ಟ್ 1 ನೇ ವಾರ | **ಭಾಗ–1 ಪೂರ್ವ ಸಿದ್ಧತಾ ಪಾಠಗಳು**<br>**(ಅ) ಚುಕ್ಕಿ ಸೇರಿಸು –ಚಿತ್ರ ರಚಿಸು**<br>• ಸಮೀಕರಿಸುವರು.<br>• ಸೃಜನಾತ್ಮಕತೆಯನ್ನು ಬೆಳೆಸಿಕೊಳ್ಳುವರು. | • ರೇಖಾಚಿತ್ರ ರಚಿಸಲು ಮುಕ್ತ ಅವಕಾಶ ಕಲ್ಪಿಸಿ ಕೊಡುವುದು<br>• ಶಿಕ್ಷಕರು ನಕಲು ಮಾಡುವರು. ನಂತರ ಮಕ್ಕಳಿಂದ ನಕಲು ಮಾಡಿಸುವರು.<br>• ಮಿಮಿಕ್ರಿ, ಧ್ವನಿ ಅನುಕರಣೆ ಮಾಡಿಸುವುದು | ಚುಕ್ಕಿ ಸೇರಿಸಿ ಚಿತ್ರ ರಚಿಸುವುದು.<br><br>ಅಭ್ಯಾಸ ಹಾಳೆ–1 |
| 02 | ಆಗಸ್ಟ್ 1ನೇ ವಾರ | **(ಆ) ಅಪಾಯದಿಂದ ಪಾರಾದ ಪಾರಿವಾಳಗಳು**<br>• ಸರಳ ಕಥೆಯನ್ನು ಆಲಿಸಿ, ಗ್ರಹಿಸಿ, ಅರ್ಥಮಾಡಿಕೊಳ್ಳುವರು. | • ವಿದ್ಯಾರ್ಥಿಗಳಿಗೆ ತಿಳಿದಿರುವ ಕಥೆಗಳನ್ನು ಹೇಳಲು ಮುಕ್ತ ಅವಕಾಶ ಕೊಡುವುದು.<br>• ಶಿಕ್ಷಕರು ಮಾದರಿ ವಾಚನ ಮಾಡುವರು. ನಂತರ ಮಕ್ಕಳಿಂದ ವಾಚನ ಮಾಡಿಸುವರು.<br>• ಶಿಕ್ಷಕರು ಕಥೆ ವಿವರಿಸುವರು.<br>• ಪತ್ರಿಕೆಗಳಲ್ಲಿ ಪ್ರಕಟವಾದ ನೀತಿಕಥೆಗಳನ್ನು ಸಂಗ್ರಹಿಸುವುದು .<br>• ಕಷ್ಟದಲ್ಲಿರುವವರಿಗೆ ಸಹಾಯ ಮಾಡಿದ ಸ್ವಂತ ಅನುಭವಗಳಿದ್ದಲ್ಲಿ ಹೇಳಿಸುವುದು. | ಕಥೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.<br><br>ಅಭ್ಯಾಸ ಹಾಳೆ–2 |
| 03 | ಆಗಸ್ಟ್ 1ನೇ ವಾರ | **(ಇ) ಗುರುವಾದ ಜೇಡರ ಹುಳು**<br>• ಪದ ಮತ್ತು ಸರಳ ವಾಕ್ಯಗಳನ್ನು ಉಚ್ಚರಿಸುವರು. | • ಸರಳ ನೀತಿಕಥೆಗಳನ್ನು ಹೇಳಲು ಮಕ್ಕಳಿಗೆ ಅವಕಾಶ ನೀಡುವುದು.<br>• ಶಿಕ್ಷಕರು ಕಥೆಯ ಮಾದರಿ ವಾಚನ ಮಾಡಿ, ನಂತರ ಮಕ್ಕಳಿಂದ ವಾಚನ ಮಾಡಿಸುವರು.<br>• ಶಿಕ್ಷಕರು ಕಥೆಯ ನೀತಿ ಹೇಳುವುದು.<br>• ಪತ್ರಿಕೆಗಳಲ್ಲಿ ಪ್ರಕಟವಾದ ಕಥೆಗಳನ್ನು ಓದಿಸುವುದು.<br>• ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರ ಮಾಹಿತಿ ಸಂಗ್ರಹಿಸುವುದು.<br>• ಗ್ರಂಥಾಲಯದ ಪುಸ್ತಕಗಳ ಬಳಕೆ. | ಮಕ್ಕಳು ತಾವು ಕೇಳಿದ, ನೋಡಿದ, ಅನುಭವಿಸಿದ ಅನುಭವಗಳನ್ನು ಹೇಳಿಸುವುದು.<br><br>ಕಥೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.<br><br>ಅಭ್ಯಾಸ ಹಾಳೆ –3 |

| | | | | |
|---|---|---|---|---|
| 04 | ಆಗಸ್ಟ್ 2ನೇ ವಾರ | **(ಈ) ಆಸೆ**<br>• ಸ್ವರಭಾರಕ್ಕನುಸಾರವಾಗಿ ಓದುವುದನ್ನು/ ಹಾಡುವುದನ್ನು ಅರಿಯುವರು. | • ವಿದ್ಯಾರ್ಥಿಗಳಿಗೆ ತಿಳಿದಿರುವ ಹಾಡನ್ನು ಹೇಳಲು ಅವಕಾಶ ನೀಡುವುದು.<br>• ಶಿಕ್ಷಕರು ಕವಿತೆಯನ್ನು ರಾಗವಾಗಿ ಹಾಡುವುದು.<br>• ಮಕ್ಕಳಿಂದ ಅಭಿನಯದೊಂದಿಗೆ ಹಾಡಿಸುವುದು.<br>• ಶಿಕ್ಷಕರು ಕವಿತೆಯ ಆಶಯ ತಿಳಿಸುವುದು.<br>• ಕವಿ ಪರಿಚಯ: ಕೆ.ಎಸ್. ನರಸಿಂಹ ಸ್ವಾಮಿಯವರ ಪರಿಚಯ ಮಾಡಿಸುವುದು.<br>• ಮೈಸೂರು ಮಲ್ಲಿಗೆ ಧ್ವನಿ ಸುರುಳಿ ಕೇಳಿಸುವುದು.<br>• ಪ್ರಾಸಪದಗಳನ್ನು ಆರಿಸಿ ಬರೆಯುವುದು. | ಪದ್ಯವನ್ನು ಹಾಡಿಸುವ ಮೂಲಕ ಮೌಲ್ಯಮಾಪನ ಮಾಡುವುದು.<br><br>ಕವಿತೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.<br><br>ಅಭ್ಯಾಸ ಹಾಳೆ–4 |
| 05 | ಆಗಸ್ಟ್ 2ನೇ ವಾರ | **(ಉ) ಗಾಳಿಪಟ**<br>• ಗುಂಪು ಚಟುವಟಿಕೆಯ ನಿರ್ದೇಶನಗಳನ್ನು ಆಲಿಸಿ ಕಾರ್ಯರೂಪಕ್ಕೆ ತರುವರು.<br>• ಗಟ್ಟಿಯಾಗಿ ಓದುವರು.<br>• ತೊಡರ್ನುಡಿ, ತೊಡರ್ಪದ, ತೊಡರ್ಸಾಲುಗಳನ್ನು (ನಾಲಿಗೆ ಸುರುಳಿ) ಅಭ್ಯಾಸ ಮಾಡುವರು. | • ವಿದ್ಯಾರ್ಥಿಗಳಿಂದ ಗಾಳಿಪಟದ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯುವುದು.<br>• ಶಿಕ್ಷಕರು ಗದ್ಯದ ಮಾದರಿ ವಾಚನ ಮಾಡುವರು. ನಂತರ ಮಕ್ಕಳಿಂದ ವಾಚನ ಮಾಡಿಸುವರು.<br>• ಗಾಳಿಪಟ ತಯಾರಿಸಲು ಮತ್ತು ಹಾರಿಸಲು ಅವಕಾಶ ನೀಡುವುದು.<br>• ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಪಠ್ಯದ ಆಯ್ದ ಕೆಲವು ಸಾಲುಗಳನ್ನು ಗಟ್ಟಿಯಾಗಿ ಓದಿಸುವುದು.<br>• ನಾಲಿಗೆ ಸುರುಳಿ ಪದ, ವಾಕ್ಯಗಳನ್ನು ವೇಗವಾಗಿ ಉಚ್ಚರಿಸುವ ಅಭ್ಯಾಸ ಮಾಡಿಸುವುದು. | ವೇಗವಾಗಿ ಉಚ್ಚರಿಸುವ ಪದ/ವಾಕ್ಯಗಳನ್ನು ಹೇಳಿಸುವುದು.<br><br>ಅಭ್ಯಾಸ ಹಾಳೆ–5 |
| 06 | ಆಗಸ್ಟ್ 3ನೇ ವಾರ | **ಭಾಗ – 2 ಗದ್ಯ ಪಾಠ –1**<br>**ನನ್ನ ದೇಶ – ನನ್ನ ಜನ**<br>• ಸರಳ ಮಾಹಿತಿ ಗ್ರಹಿಸುವರು.<br>• ಸರಳ ಪ್ರಶ್ನೆಗಳಿಗೆ ಉತ್ತರಿಸುವರು.<br>• ಸರಳ ಸೂಚನೆ ಅನುಸರಿಸಿ ಬರೆಯುವರು. | • ಭಾರತದ ಬಗ್ಗೆ ಮಕ್ಕಳಲ್ಲಿರುವ ವಿಚಾರಗಳನ್ನು ಕಲೆ ಹಾಕುವುದು.<br>• ದೇಶಭಕ್ತಿ ಗೀತೆಯನ್ನು ಹಾಡಿಸುವುದು/ಧ್ವನಿಸುರುಳಿ ಕೇಳಿಸುವುದು.<br>• ಶಿಕ್ಷಕರು ಗದ್ಯದ ಮಾದರಿ ವಾಚನ ಮಾಡುವರು. ನಂತರ ಮಕ್ಕಳಿಂದ | ಶಿಕ್ಷಕರು ಪಾಠದ ಮಧ್ಯೆ ಪ್ರಶ್ನೆಗಳನ್ನು ಕೇಳುವುದರ ಮೂಲಕ ಮೌಲ್ಯಮಾಪನ ಮಾಡುವುದು. |

| | | | | |
|---|---|---|---|---|
| | | | ವಾಚನ ಮಾಡಿಸುವರು.<br>• ಶಿಕ್ಷಕರು ಗದ್ಯ ವಿಷಯ ಅರ್ಥೈಸುವರು.<br>• ವೈವಿಧ್ಯತೆಯಲ್ಲಿ ಏಕತೆ ಬಗ್ಗೆ ಟಿಪ್ಪಣಿ ಬರೆಸುವುದು.<br>• ಸ್ವಾತಂತ್ರ್ಯ ಹೋರಾಟಗಾರರ, ಕವಿಗಳ, ಪುಣ್ಯಪುರುಷರ ಕುರಿತ ಪುಸ್ತಕ ನೀಡಿ ಓದುವಂತೆ ಉತ್ತೇಜಿಸುವುದು.<br>• ದೇಶಾಭಿಮಾನ ಬೆಳೆಸುವುದು.<br>• ಸೈದ್ಧಾಂತಿಕ ವ್ಯಾಕರಣ: ಕನ್ನಡ ವರ್ಣಮಾಲೆಯಲ್ಲಿ 49 ಅಕ್ಷರಗಳಿವೆ.<br>1. ಸ್ವರಗಳು–13<br>2. ಯೋಗವಾಹಗಳು–02<br>3. ವ್ಯಂಜನಗಳು –34<br><br>ವರ್ಣಮಾಲೆಯನ್ನು ತಿಳಿಸಿಕೊಟ್ಟು, ಅವುಗಳನ್ನು ಸರಿಯಾಗಿ ಬರೆಯುವುದನ್ನು ಹಾಗೂ ಉಚ್ಚಾರಣೆ ಮಾಡುವುದನ್ನು ಕಲಿತರೆ ಕನ್ನಡ ಭಾಷೆಯನ್ನು ಸುಲಭವಾಗಿ ಕಲಿಯಬಹುದು. | ಅಭ್ಯಾಸ ಹಾಳೆ – 6 |
| | | ಪೂರಕ ಓದು:<br>ಈ ಮಣ್ಣು ನಮ್ಮದು<br><br>• ಮಕ್ಕಳು ಸ್ವಂತವಾಗಿ ಓದುವ ಬರೆಯುವ ಕೌಶಲವನ್ನು ತಿಳಿಯುವರು. | ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಓದುವ ಸಾಮರ್ಥ್ಯವನ್ನು ಬೆಳೆಯುವಂತೆ ಅವಕಾಶ ಕಲ್ಪಿಸುವುದು.<br><br>ಪ್ರಸ್ತುತ ಗದ್ಯದಲ್ಲಿನ ವಿಚಾರಗಳೊಂದಿಗೆ ಸಾಮ್ಯತೆಯನ್ನು ಗಮನಿಸುವರು. | ಪದ್ಯವನ್ನು ಹಾಡಿಸುವ ಮೂಲಕ ಮೌಲ್ಯಮಾಪನ ಮಾಡುವುದು. |
| 07 | ಆಗಸ್ಟ್ 4ನೇ ವಾರ | **ಪದ್ಯ ಪಾಠ – 2**<br>**ಕನ್ನಡ ನುಡಿ**<br>ಕವಿ ಪರಿಚಯ<br>ಎ.ಕೆ. ರಾಮೇಶ್ವರ<br>• ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗೀತೆ ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವರು.<br>• ಗುಣಿತಾಕ್ಷರ ಮತ್ತು ಒತ್ತಕ್ಷರಗಳ ನಕಲು ಮಾಡುವರು.<br>• ಸರಳ ವಾಕ್ಯಗಳನ್ನು | • ಕನ್ನಡ ನಾಡು ನುಡಿಗೆ ಸಂಬಂಧಿಸಿದ ಹಾಡು ಹೇಳಿಸುವುದು/ಧ್ವನಿ ಸುರುಳಿ ಕೇಳಿಸುವುದು.<br>• ಶಿಕ್ಷಕರು ಪದ್ಯದ ಮಾದರಿ ವಾಚನ ಮಾಡುವರು. ನಂತರ ಮಕ್ಕಳಿಂದ ವಾಚನ ಮಾಡಿಸುವರು.<br>• ಶಿಕ್ಷಕರು ಕವಿಗಳ ಪರಿಚಯವನ್ನು ಮಾಡಿಕೊಡುವುದು.<br>• ನಂತರ ಪದ್ಯದ ವಿವರಣೆಯನ್ನು ತಿಳಿಸುವುದು.<br>• ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ | ಮಕ್ಕಳಿಂದ ಸ್ವಂತ ವಾಕ್ಯ ರಚನೆ ಮಾಡಿಸುವುದು.<br><br>ಗುಣಿತಾಕ್ಷರ ಮತ್ತು ಒತ್ತಕ್ಷರ ಹೊಂದಿರುವ ಪದಗಳ ನಕಲು ಮಾಡಿಸುವುದು<br><br>ಅಭ್ಯಾಸ ಹಾಳೆ – 7 |

| | | | | |
|---|---|---|---|---|
| | | ಬರೆಯುವರು. | ನಿರ್ದಿಷ್ಟ ಪದ್ಯಭಾಗದ ಸಾರಾಂಶ ಹೇಳಲು ಅವಕಾಶ ನೀಡುವುದು.<br>• ಶರಣರ ವಚನ ಸಂಗ್ರಹಿಸುವುದು.<br>• ದಾಸರ ಕೀರ್ತನೆಗಳನ್ನು ಸಂಗ್ರಹಿಸುವುದು.<br>• ಪದ್ಯದಿಂದ ಪ್ರಾಸಪದಗಳನ್ನು ಆಯ್ದು ಬರೆಯುವುದು. | |

## ವಿಷಯ: ದ್ವಿತೀಯ ಭಾಷೆ ಕನ್ನಡ

## ತರಗತಿ: 5 ಪುನರ್ ಮನನ – ಚುಕ್ಕಿ ಸೇರಿಸು – ಚಿತ್ರ ರಚಿಸು ಅಭ್ಯಾಸದ ಹಾಳೆ – 01

1. ಚುಕ್ಕಿ, ಸಂಖ್ಯೆ ಸೇರಿಸಿ ಚಿತ್ರ ರಚಿಸಿ: –









## ವಿಷಯ: ದ್ವಿತೀಯ ಭಾಷೆ ಕನ್ನಡ

## ತರಗತಿ : 5ಪುನರ್ ಮನನ – ಅಪಾಯದಿಂದ ಪಾರಾದ ಪಾರಿವಾಳಗಳು ಅಭ್ಯಾಸ ಹಾಳೆ –02

1. ಪಾರಿವಾಳದ ಚಿತ್ರ ಬರೆಯಿರಿ

2. ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ:–

   ಅ) ಯಾರು ಬಲೆ ಬೀಸಿದರು ?

   ..........................................................................................................

   ಆ) ಕಾಗೆಯು ಪಾರಿವಾಳಗಳಿಗೆ ಏನು ಹೇಳಿತು ?

   ..........................................................................................................

   ಇ) ಯಾರ ಸಹಾಯದಿಂದ ಬಲೆ ಕತ್ತರಿಸಿಕೊಂಡವು ?

   ..........................................................................................................

   ಈ) ಈ ಕಥೆಯಿಂದ ಯಾವ ನೀತಿ ಕಲಿಯುವಿರಿ ?

   ..........................................................................................................

## ವಿಷಯ : ದ್ವಿತೀಯ ಭಾಷೆ ಕನ್ನಡ

**ತರಗತಿ :5ಪುನರ್ ಮನನ – ಗುರುವಾದ ಜೇಡರಹುಳು ಅಭ್ಯಾಸ ಹಾಳೆ –03**

1. ಜೇಡರ ಬಲೆ ಚಿತ್ರ ಬಿಡಿಸಿರಿ:–

2. ಈ ಕೆಳಕಂಡ ಪದಗಳನ್ನು ಓದುತ್ತಾ ಬರೆಯಿರಿ:

| | | | | |
|---|---|---|---|---|
| ಬಲೆ | ರಾಜ | ಗಾದೆ | ಗುರು | ಸಹನೆ |
| | | | | |
| | | | | |
| ಜೇಡರ ಹುಳು | ಪ್ರಯತ್ನ | ಘಟನೆ | ಆದರ್ಶ | ಜಯಶಾಲಿ |
| | | | | |
| | | | | |

3. ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ:–

ಅ) ರಾಜನ ಮೇಲೆ ಯಾರು ದಂಡೆತ್ತಿ ಬಂದರು ?

..........................................................................................................................

ಆ)ಜೇಡ ಯಾವಾಗ ಯಶಸ್ಸು ಕಂಡಿತು ?

..........................................................................................................................

ಇ)ಈ ಕಥೆಯಲ್ಲಿ ಬಳಕೆಯಾಗಿರುವ ಗಾದೆ ಮಾತು ಯಾವುದು ?

..........................................................................................................................

ಈ) ಈ ಕಥೆಯಿಂದ ಯಾವ ನೀತಿ ಕಲಿಯುವಿರಿ ?

..........................................................................................................................

## ವಿಷಯ : ದ್ವಿತೀಯ ಭಾಷೆ ಕನ್ನಡ

## ತರಗತಿ : 5ಪುನರ್ ಮನನ – ಆಸೆ      ಅಭ್ಯಾಸ ಹಾಳೆ –04

1. ಕಾಮನ ಬಿಲ್ಲಿನ ಚಿತ್ರ ಬರೆದು ಬಣ್ಣ ತುಂಬಿ:–

2. ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ:–

ಅ) ಹೂ ಯಾವುದಕ್ಕೆ ತಲೆ ದೂಗುತ್ತದೆ ?

.............................................................................................................................

ಆ) ಆಸೆ ಕವಿತೆ ಬರೆದ ಕವಿಯ ಹೆಸರೇನು ?

.............................................................................................................................

ಇ) ಕವಿಗೆ ಎಲ್ಲಿ ದೀಪವಿಡುವ ಆಸೆ ?

.............................................................................................................................

ಆ) ಕವಿಯಂತೆ ನೀವು ಏನಾಗಲು ಆಸೆ ಪಡುತೀರಿ ?

.............................................................................................................................

**ವಿಷಯ : ದ್ವಿತೀಯ ಭಾಷೆ ಕನ್ನಡ**

**ತರಗತಿ : 5ಪುನರ್ ಮನನ – ಗಾಳಿಪಟ ಅಭ್ಯಾಸ ಹಾಳೆ 05**

1. ವಿವಿಧ ಬಗೆಯ ಗಾಳಿಪಟಗಳ ಚಿತ್ರ ಬರೆದು ಬಣ್ಣ ಹಾಕಿ:

2. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :–
   ಅ) ವಿವಿಧ ಬಗೆಯ ಗಾಳಿಪಟಗಳು ಯಾವುವು ?

   ..........................................................................................................

   ಆ) ಗಾಳಿಪಟಗಳಿಗೆ ಬಾಲಂಗೋಚಿ ಏಕೆ ಬೇಕು ?

   ..........................................................................................................

   ಇ) ಆಕಾಶದಲ್ಲಿ ಹಾರುವ ಗಾಳಿಪಟಗಳು ಜನರಿಗೆ ಹೇಗೆ ಕಾಣುತ್ತಿದ್ದವು ?

   ..........................................................................................................

3. ಈ ಕೆಳಗಿನ ಸಾಲುಗಳನ್ನು ನಕಲು ಮಾಡಿ ಗಟ್ಟಿಯಾಗಿ ಓದಿ:
   ಅ) ಮೇಲೆ ಕೆಳಗೆ ಲಾಗ ಹೊಡೆಯುವ ಚೆಲುವಿನ ತಾರೆಗಳು ಪಟಪಟ ಗಾಳಿಪಟಗಳು.

   ಆ) ತಂದೆ ತಾಯಿಗಳ ಗೋಳಾಟ. ಮಕ್ಕಳಿಗೆ ಆಟ, ಪಾಲಕರಿಗೆ ಸಂಕಟ

**ವಿಷಯ: ದ್ವಿತೀಯ ಭಾಷೆ ಕನ್ನಡ**

**ತರಗತಿ : 5 ಪುನರ್ ಮನನ ನನ್ನ ದೇಶ – ನನ್ನ ಜನ ಅಭ್ಯಾಸ ಹಾಳೆ –06**

1. ನಮ್ಮ ರಾಷ್ಟ್ರೀಯ ಹೆಗ್ಗುರುತುಗಳ ಹೆಸರುಗಳನ್ನು ಬರೆಯಿರಿ











2. ಈ ಕೆಳಗಿನ ವಾಕ್ಯಗಳಲ್ಲಿರುವ ದೋಷಗಳನ್ನು ಸರಿಪಡಿಸಿ ಬರೆಯಿರಿ:–
   ಅ) ನಮ್ಮದು ಬಹುಭಾಷೆ ಹೊಂದಿರುವ ಸಣ್ಣ ದೇಶ.

   ..........................................................................................................................

   ಆ) ದಕ್ಷಿಣ ಪೀಟದ ಭೂಮಿಯನ್ನು ಸಮುದ್ರಗಳು ಸುತ್ತುವರೆದಿವೆ.

   ..........................................................................................................................

3. ಈ ಕೆಳಗಿನ ಪದಗಳನ್ನು ಸ್ವಂತವಾಕ್ಯಗಳಲ್ಲಿ ಬಳಸಿ ಬರೆಯಿರಿ:

   ಅ) ಪುರಾತನ :

   ಆ) ಹಚ್ಚಹಸಿರು :

4. ಬಿಟ್ಟ ಸ್ಥಳದಲ್ಲಿ ಸೂಕ್ತ ಪದ ಆರಿಸಿ ಭರ್ತಿ ಮಾಡಿ
(ತ್ಯಾಗ ಮೂರು ಶಾಂತಿ ಸಮೃದ್ಧಿ )

ಅ) ನಮ್ಮ ರಾಷ್ಟ್ರಧ್ವಜವು ಬಣ್ಣಗಳಿಂದ ಕೂಡಿದೆ.

ಆ) ಕೇಸರಿ ಬಣ್ಣದ ಸಂಕೇತ

ಇ) ಬಿಳಿಯ ಬಣ್ಣದ ಸಂಕೇತ

ಈ) ಹಸಿರು ಬಣ್ಣದ ಸೂಚಕ

5. ಒಂದರ ಹೋಲಿಕೆಯಂತೆ ಇನ್ನೊಂದು ಹೆಸರು ಬರೆಯಿರಿ:–
ಮಾದರಿ: ಕಿತ್ತೂರು ಚೆನ್ನಮ್ಮ : ಝಾನ್ಸಿ ರಾಣಿ ಲಕ್ಷ್ಮಿಬಾಯಿ

ಅ) ಬುದ್ಧ :

ಆ) ವಿವೇಕಾನಂದ :

6. ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ:–
ಅ) ನಮ್ಮ ದೇಶ ಯಾವುದು ?

.......................................................................................................................................

ಆ) ಭಾರತವನ್ನು ಯಾವ ಯಾವ ಹೆಸರಿನಿಂದ ಕರೆಯುತ್ತಾರೆ?

.......................................................................................................................................

ಇ) ನಮ್ಮ ರಾಷ್ಟ್ರಗೀತೆ ಯಾವುದು ? ಅದನ್ನು ರಚಿಸಿದ ಕವಿ ಯಾರು ?

.......................................................................................................................................

ಈ) 'ವಂದೇ ಮಾತರಂ ಗೀತೆಯನ್ನು ರಚಿಸಿದವರು ಯಾರು ?

.......................................................................................................................................

**ವಿಷಯ : ದ್ವಿತೀಯ ಭಾಷೆ ಕನ್ನಡ**

**ತರಗತಿ : 5 ಪುನರ್ ಮನನ ಪದ್ಯ ಪಾಠ – 2 ಅಭ್ಯಾಸ ಹಾಳೆ 07**

1. ಒತ್ತಕ್ಷರದ ಪದಗಳನ್ನು ನಕಲು ಮಾಡಿ:–

| | | | | | | | |
|---|---|---|---|---|---|---|---|
| ಚಿತ್ತ | ಸಕ್ಕರೆ | ಪುಣ್ಯ | ಅಮೃತ | ನನ್ನಿ | ಹೃದಯ | ಕನ್ನಡ | ಮಕ್ಕಳು |
| | | | | | | | |
| | | | | | | | |
| ಪುಣ್ಯಕೋಟಿ | ಸಂಚಿಹೊನ್ನಮ್ಮ | ಶಿಕ್ಷಣ | ಬಾಲ್ಯ | ಪ್ರಸಿದ್ಧ | ಸಮಗ್ರ | ಸತ್ಯ | ಪ್ರಶಸ್ತಿ |
| | | | | | | | |
| | | | | | | | |

2. ಈ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ:–

ಅ). ಚಿತ್ತ : ........................................................................................................................

ಆ) ತಿರುಳು : ......................................................................................................................

3. ಪ್ರಾಸ ಪದ ಬರೆಯಿರಿ :–

ನುಡಿಯಲಿ

ತೊರೆಯು

4. ಈ ಕೆಳಗಿನ ವಾಕ್ಯಗಳಲ್ಲಿ ದೋಷಯುಕ್ತ ಪದಗಳನ್ನು ಸರಿಪಡಿಸಿ :–

ಅ) ಕನ್ನಡ ಎಡೆಯಲಿ ಕನ್ನಡ ಗಡಿಯಲಿ ಹೃದಯದ ಒಲುಮೆ.

........................................................................................................................................

ಆ) ನಮ್ಮಯ ನಾಡಿನ ಪುಣ್ಯದ ಗೂಡಿನ ನಿನ್ನಯ ಕಥೆಯನು ಬರೆಯುತ್ತ.

..................................................................................................................................................

5. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :–

ಅ). ಕನ್ನಡ ನುಡಿಯಲ್ಲಿ ಏನು ತುಂಬಿದೆ ?

................................................................................................................................

ಆ). ಹದಿಬದೆಧರ್ಮ ಗ್ರಂಥವನ್ನು ಬರೆದವರು ಯಾರು ?

................................................................................................................................